# ಕುವೆಂಪು ವಿವಾಹ ಸಂಹಿತೆ ಕುರಿತು ಒಂದು ಅಧ್ಯಯನ

ಡಿ.ಪುರುಷೋತ್ತಮ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ಧಾರ್ಥನಗರ, ಮೈಸೂರು.

ಮತ ಮತ್ತು ವರ್ಗ ಎರಡರಿಂದಲೂ ನೋವನ್ನು ಅನುಭವಿಸುತ್ತಿರುವವಳು ಹೆಣ್ಣು. ಕುಟುಂಬ ಜಾತಿ, ವರ್ಗಗಳ ಒಳಗೆ ನಿತ್ಯ ಶೋಷಣೆಗೆ ಬಲಿಯಾಗುವವಳು ಹೆಣ್ಣು. ವಿವಾಹದಂತಹ ವಿಧಿಯು ಮತ್ತೊಂದು ರೀತಿಯಿಂದ ಹೆಣ್ಣು ಹೆತ್ತವರ ಕುಟುಂಬಗಳಿಗೆ ಶೋಷಣೆಯ ಕೇಂದ್ರವಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಸಾಹಿತ್ಯೇತರ ವಿಚಾರವಾದ `ಮಂತ್ರಮಾಂಗಲ್ಯ' ವಿಧಿಯು ಎಲ್ಲರ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಮೂರು ಹಂತಗಳಲ್ಲಿ ಪ್ರಧಾನವಾಗುತ್ತದೆ. 1. ರಚನೆಯ ದೃಷ್ಟಿಯಿಂದ, 2. 'ಹೆಣ್ಣಿ'ನ ಜೀವನದ ದೃಷ್ಟಿ ಮತ್ತು ಅವಳ ಕುಟುಂಬದ ದೃಷಿಯಿಂದ, 3. ಗಂಡಿನ ನಿಜವಾದ ಜವಾಬ್ದಾರಿಯನ್ನು ತಿಳಿಸುವುದರಿಂದ. ಬಹಳ ಮುಖ್ಯವಾಗುತ್ತದೆ. ಕುವೆಂಪು ಅವರು ನೀಡಿದ ಒಟ್ಟು ಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿ ದೃಷ್ಟಿಯಿಂದ ವಿಶ್ವಮಾನವ ಸಂದೇಶ ಮತ್ತು ಮಂತ್ರಮಾಂಗಲ್ಯ ಎಂಬ ವಿವಾಹಸಂಹಿತೆ ಬಹಳ ಮುಖ್ಯವಾದದ್ದು. ಶತಮಾನಗಳಿಂದ ಹೆಣ್ಣಿನ ಮೇಲೆ ಮತ್ತು ಹೆಣ್ಣು ಹೆತ್ತವರ ಮೇಲೆ ನಡೆಯುತ್ತಿರುವ ಶೋಷಣೆ ಮತ್ತು ಹಿಂಸೆಯನ್ನು ಕಂಡು ಸಕರ್ಾರ ಅನೇಕ ಕಾನೂನುಗಳನ್ನು ಮಾಡಿದ್ದರೂ ಅದು ಸುಧಾರಣೆಯಾಗಿಲ್ಲ. ಸುಧಾರಣೆಗೆ ಸಮಾಜದಲ್ಲಿ ಅನೇಕ ಸುಧಾರಕರು ಪ್ರಯತ್ನ ಪಟ್ಟರೂ ಅದು ಸುಧಾರಿಸಿಲ್ಲ. ಈ ಎಲ್ಲ ವಿಷಯವನ್ನು ತಿಳಿದು ಕೂಡ ಕುವೆಂಪು ಅವರು 'ಮಂತ್ರಮಾಂಗಲ್ಯ' ಎಂಬ ವಿವಾಹ ಸಂಹಿತೆಯನ್ನು ಏಕೆ ರಚನೆ ಮಾಡಿದರು? ಅದರ ಉದ್ದೇಶವಾದರೂ ಏನು? ತೇಜಸ್ವಿ ಮತ್ತು ಅವರ ಗೆಳೆಯರ ಗುಂಪು ಇದನ್ನು ಒಂದು ವ್ರತದಂತೆ ಪಾಲಿಸಿದ್ದು ಏಕೆ? ಇದು ಕುವೆಂಪು ಅವರ ನೆಲೆಯಿಂದಲೇ ಗ್ರಹಿಸಿದರೆ ಉಚಿತವಾದದ್ದು. ಇದು ಕೇವಲ ಒಂದು ಪುಸ್ತಕವಲ್ಲ, ಸಂಕಲನವಲ್ಲ, ಇದೊಂದು ವಿವಾಹದ ವಿಧಾನ.

ವಿವಾಹ ನಡೆಯುವುದೇ ಹಲವರ ಕನಸು ಮತ್ತು ಹಲವು ಆಚರಣೆ, ಹಲವರ ಸಂಭ್ರಮಗಳನ್ನು ಹೆಚ್ಚಿಸಲು, ಒಂದು ಗಂಡು, ಒಂದು ಹೆಣ್ಣನ್ನು ಸೇರಿಸುವ ವಿಧಾನಕ್ಕೆ ಮಾಡುವ ವೆಚ್ಚ, ಹೊರುವ ಶ್ರಮ, ಮಾನಸಿಕವಾಗಿ ಅನ್ಯರ ಮೆಚ್ಚುಗೆಗೆ ಪಾತ್ರರಾಗಲು ಮಾಡುವ ಆಡಂಬರದ ಆಚರಣೆ ಇದು. ವಿವಾಹ ವಿಧಿಯನ್ನು ಪಡೆಯ ಬೇಕಾಗಿರುವುದು ವಧುವರರಾದರೂ, ಏಕಕಾಲದಲ್ಲಿ ಅದರ ಆಚರಣೆಯಲ್ಲಿ ನೂರಾರು ಜನರು ನಡೆಯುವ ಬೇರೆ ಬೇರೆ ಆಚರಣೆಗಳಲ್ಲಿ ತೊಡಗುವುದನ್ನು ಲೋಕರೂಢಿಯ ಎಲ್ಲ ಮದುವೆಗಳಲ್ಲೂ ಕಾಣಬಹುದಾಗಿದೆ. ಬದುಕನ್ನು ವ್ರತದಂತೆ ಆಚರಿಸಲು ಗಂಡು ಹೆಣ್ಣು ಒಂದಾಗಿ ಬಾಳಲು ಅಗತ್ಯವಾಗಿ ಬೇಕಾದ ಸಂಹಿತೆಯನ್ನು ಕನ್ನಡದಲ್ಲಿ ಕುವೆಂಪು ಅವರು ಸಂಸ್ಕರಿಸಿ ಸೃಜಿಸಿದ ವಿವಾಹ ಸಂಹಿತೆಯ ಸಾಹಿತ್ಯವು ಬಹಳ ಮುಖ್ಯವಾದದ್ದು, ಅನುಸರಣೀಯವಾದ್ದು. ಎಲ್ಲ ಸ್ತ್ರೀವಾದಿಗಳು,

ಹೋರಾಟಗಾರರು ಇದನ್ನು ಸಮಾಜದ ಮುಖ್ಯವಾಹಿನಿಗೆ ಜನಸಾಮ್ಯಾನರ ಮನೆ ಮನಗಳಿಗೆ ತಲುಪಿಸುವ ಕಾರ್ಯವನ್ನು ಮಾಡಬೇಕಾಗಿದೆ.

ಮನುಷ್ಯನು ಅನುಕರಣೆಯಲ್ಲಿ ಇಟ್ಟಿರುವ ನಂಬಿಕೆ ಅನುಸರಣೆಯಲ್ಲಿ ಹೊಂದದೆ ಇರುವುದಕ್ಕೆ ಅನೇಕ ಮಹನೀಯರ ಮಾತುಗಳ ಇಂದಿಗೂ ಮಾತುಗಳಾಗೇ ಉಳಿದಿರುವುದೇ ಕಾರಣ. ಕುವೆಂಪು ಅವರು ಎಂದೂ ಈ ಬಗ್ಗೆ ಯಾರನ್ನೂ ಒತ್ತಾಯ ಪೂರಕವಾಗಿ ಮಾಡಲು ಹೇಳಿಲ್ಲ, ಆಚರಿಸಲು ಕೂಡ ಸೂಚಿಸಲಿಲ್ಲ. ತಮ್ಮ ವಿವಾಹದ ಸಂದರ್ಭದಲ್ಲಿ ಅವರು ಅನುಸರಿಸಿದ ಸರಳ ವಿವಾಹದ ಆಚರಣೆಯನ್ನು ಮಗನ ಮದುವೆಯ ಸಂದರ್ಭದಲ್ಲಿ ವಿವಾಹ ಸಂಹಿತೆಯಾಗಿ ಸೃಜಿಸಿದರು. ಅದರಿಂದ ಪ್ರಭಾವಿತರಾದ ಒಂದಷ್ಟು ಜನ ಯುವಕರು ಅದನ್ನು ಅನುಷ್ಠಾನ ಮಾಡುವುದರೊಂದಿಗೆ, ಅದರ ಪ್ರಚಾರಮಾಡುತ್ತ ವಿವಾಹ ವಿಧಾನವನ್ನು ಅನುಸರಿಸಲು ಪ್ರೇರಕರಾಗಿದ್ದಾರೆ.

ಯಾವ ರೂಪದಿಂದಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆಯನ್ನಾಗಲೀ, ವಧುದಕ್ಷಿಣೆಯನ್ನಾಗಲೀ ಯಾರೂ ಸ್ವೀಕರಿಸ ಕೂಡದು. ವಧೂವರರನ್ನು ಆತ್ಮಗೌರವವಿಲ್ಲದ ಮೃಗಗಳನ್ನಾಗಿ ಪರಿಗಣಿಸುವ ಈ ದುಡ್ಡಿನ ದಳ್ಳಾಳಿ ವ್ಯವಹಾರವನ್ನು ಮಂತ್ರ ಮಾಂಗಲ್ಯ ಸಂಪೂರ್ಣ ನಿಷೇಧಿಸಿದೆ. ಹೆಣ್ಣು ಭ್ರೂಣ ಹತ್ಯೆಯಿಂದ ಹಿಡಿದು ಮದುವೆ ಮಾಡಿಕೊಂಡ ಹೆಣ್ಣು ಮಗಳನ್ನು ಬೆಂಕಿಹಚ್ಚಿ ಸುಡುವ ಪರಮ ಪಾತಕಗಳವರೆಗೂ ಕಾರಣವಾಗಿರುವ ಈ ದುಡ್ಡಿನ ದಳ್ಳಾಳಿ ವ್ಯವಹಾರದಲ್ಲಿ ಭಾಗಿಗಳಾಗುವ ಹಿರಿಯರು ಮಂತ್ರೋಪದೇಶಕ್ಕೂ, ಪ್ರತಿಜ್ಞಾ ವಿಧಿ ಉಪದೇಶಕ್ಕೂ, ವಧೂವರರು ಮಂತ್ರೋಚ್ಚಾರಕ್ಕೂ, ಪ್ರತಿಜ್ಞೆ ತೆಗೆದುಕೊಳ್ಳಲೂ ಅನರ್ಹರಾಗಿರುತ್ತಾರೆ.[1] ವಿವಾಹ ನಡೆಸುವ ಕ್ರಿಯೆಯಲ್ಲಿ ಪ್ರಮುಖವಾಗಿ ಹಿರಿಯರು, ಮಾರ್ಗದರ್ಶಕರು ಇರುತ್ತಾರೆ. ಆದರೆ ಇಲ್ಲಿ ಪ್ರತಿಜ್ಞಾ ವಿಧಿ ಉಪದೇಶ ಮಾಡುವವರು ಮತ್ತು ಪ್ರತಿಜ್ಞೆ ತೆಗೆದು ಕೊಳ್ಳುವವರ ಸಾಮಾಜಿಕ ಜವಾಬುದಾರಿಯನ್ನು ಇದು ಹೆಚ್ಚಿಸುತ್ತದೆ. ಆ ನೆಲೆಯಲ್ಲಿ ಪ್ರಶ್ನಿಸುತ್ತದೆ. ಇದು ಬಹಳ ಮುಖ್ಯವಾಗಿ ಮನಗಾಣಬೇಕಾದ ವಿಚಾರ. ಸಾಹಿತ್ಯ ಉದ್ದೇಶ, ಸಂವಿಧಾನದ ಉದ್ದೇಶ, ಕಾನೂನುಗಳ ಉದ್ದೇಶಗಳು ಎಲ್ಲ ಕಾಲದಲ್ಲೂ ಇದೇ ಆಗಿರುತ್ತದೆ. ಪ್ರಬುದ್ಧತೆ ಮತ್ತು ವೈಚಾರಿಕತೆಯನ್ನು ಹೆಚ್ಚಿಸುವಲ್ಲಿ ಈ ವಿವಾಹ ಸಂಹಿತೆ ಬಹಳ ನಿರ್ದಿಷ್ಟವಾಗಿದೆ. ಈ ಬಗ್ಗೆ ಖಚಿತವಾದ ಉಪಯುಕ್ತವಾದ ಸೂಚನೆಗಳನ್ನು ಕುವೆಂಪು ಅವರು ನೀಡಿದ್ದಾರೆ. ಅರ್ಥವಿಲ್ಲದ ಅರ್ಥವ್ಯಯವನ್ನು, ಶಬ್ದವ್ಯಯದ ಆಚರಣೆಯನ್ನು ಖಂಡಿಸುತ್ತಾರೆ. ವಿವಾಹ ಕಾರ್ಯವು ಸಮಾಜದಲ್ಲಿ ಅನುಕರಣೆಯ ಹಾದಿಯಲ್ಲಿದೆ. ಅದನ್ನು ಆದರ್ಶಗಳ ಅನುಸರಣೆಯಲ್ಲಿ ಮುನ್ನಡೆಸುವ ಅಗತ್ಯವಿದೆ.

ಪ್ರತಿಜ್ಞಾವಿಧಿಗಳ ಉದ್ದೇಶವಲ್ಲದೆ ಇನ್ನಾವುದೇ ಶಾಸ್ತ್ರಾಚಾರಗಳನ್ನಾಗಲೀ, ಜೋಯಿಸರಿಂದ ಜಾತಕಾದಿಗಳನ್ನು ನೋಡಿಸುವುದೇ ಆಗಲೀ ನಿಷಿದ್ಧ. ಜಾತಿಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಅನಿಷ್ಟಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಈ ಶಾಸ್ತ್ರಾಚಾರಗಳಿಂದ ಭಾರತೀಯರನ್ನು ವಿಮುಕ್ತಗೊಳಿಸುವುದೇ ಮಂತ್ರಮಾಂಗಲ್ಯದ ಮೂಲ ಉದ್ದೇಶ. ಇಲ್ಲಿ ಯಾವ ವೃತ್ತಿ ಪುರೋಹಿತನಿಗೂ ಪ್ರವೇಶವಿಲ್ಲ. ಓದು ಬರಹ ಕಲಿತ, ಈ ಮಂತ್ರಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲ ವಧೂವರರ ತಂದೆ ತಾಯಿಗಳಾಗಲೀ ಗುರುಹಿರಿಯರಾಗಲೀ ಯಾರಾದರೊಬ್ಬರು ಮಂತ್ರಮಾಂಗಲ್ಯದ ಮಂತ್ರಗಳನ್ನು ವಿವಾಹ ಸಂಹಿತೆಯನ್ನು ಮಧೂವರರಿಗೆ ಬೋಧಿಸಬಹುದು.[2] ಮತ, ವರ್ಗ, ಜಾತಿಪದ್ಧತಿ ಆಚರಣೆಗಳ ಕೇಂದ್ರವಾದ ಪ್ರಸಕ್ತ ವಿವಾಹ ಪದ್ಧತಿಯನ್ನು ಸಂಹಿತೆಯನ್ನು ನಾವು ಈ ಸಂಹಿತೆಯ ವಿಧಿ ವಿಧಾನದಲ್ಲಿ ಕಾಣದ ಹೊರತು ದೇಶದಲ್ಲಿ ಸಮಾನತೆ, ಸಹಬಾಳ್ವೆ, ಸಹಿಷ್ಣುತೆ ಎಂಬ ಪದಗಳಿಗೆ

ಅರ್ಥವಿಲ್ಲ. ಅನ್ಯವಾದುವನ್ನು ಒಪ್ಪಿ ಕೊಂಡು ನಮ್ಮದಾಗಿಸಿ ಕೊಂಡು ಬದುಕುವ ಮನೋಧರ್ಮ ಭಾರತೀಯತೆಯಲ್ಲಿದೆ. ಹೀಗೆ ಅನುಕರಣೆಯ, ಪ್ರತಿಷ್ಠೆಯ ಆಚರಣೆಯಲ್ಲಿ ಇಂದು ನಾವು ಕಳೆದು ಹೋಗಿದ್ದೇವೆ. ಜಾತಿ ಪದ್ಧತಿಯಂತಹ ಕೆಟ್ಟ ಆಚರಣೆ ಹೆಚ್ಚಾಗಿ ಬಳಕೆಗೆ ಬರುವುದು ದೇವಾಲಯ ಪ್ರವೇಶ, ವಿವಾಹ, ಸಹಭೋಜನದ ಸಂದರ್ಭದಲ್ಲಿ. ಕುವೆಂಪು ಇದನ್ನು ಖಂಡಿಸುವುದು ಕೂಡ ಇದೇ ನೆಲೆಗಳಲ್ಲಿ. ಕುವೆಂಪು ಅವರು ದೇವಾಲಯಗಳಿಗೆ ಹೋಗದೇ ದೂರ ಉಳಿಯುವುದು ಇದೇ ಕಾರಣಕ್ಕೆ ಮತ್ತು ದುಡ್ಡಿನ ದಳ್ಳಾಳಿ ವ್ಯವಹಾರ ಖಂಡಿಸುವುದಕ್ಕಾಗಿಯೇ. ಜಾತಿ ವಿನಾಶಕ್ಕೆ ಮೊದಲ ಮದ್ದು ಅಂತರ್ಜಾತಿ ವಿವಾಹಗಳು, ಅಂತರ್ ಮತವಿವಾಹಗಳು ಆದಾಗಲೇ. ಕುವೆಂಪು ಅವರ ಕೊಡುಗೆಯನ್ನು ಈ ನೆಲೆಯಲ್ಲಿ ಸಮಾಜಮುಖಿಯಾಗಿಸಿದಾಗಲೇ ಪೆರಿಯಾರ್ ಮತ್ತು ಕುವೆಂಪು ಅವರ ವಿಭಿನ್ನ ಮುಖ ಹಾಗೂ ನೆಲೆಗಳನ್ನು ಕಾಣಲು ಸಾಧ್ಯ. ಅದೇ ರೀತಿ ಮಹಾತ್ಮಾ ಗಾಂಧಿಯ ಸಬರಮತಿ ಆಶ್ರಮ ಮುಖ್ಯವಾಗುವುದು ಇದೇ ನೆಲೆಯಲ್ಲಿ. ಬುದ್ಧ ಬಸವ ಕನಕರ ಚಿಂತನೆ ಇರುವುದು ಇದೇ ನೆಲೆಯಲ್ಲಿ, ಕುವೆಂಪು ಪರಂಪರೆಯ ಧ್ವನಿಯಾಗಿ ಮತ್ತೆ ಕಾಣಲು ಸಾಧ್ಯವಾಗುವುದು ಇದೇ ಕಾರಣಕ್ಕೆ. ಜಾತಿ ಅಂತಹ ಆಚರಣೆಯನ್ನು ಮೀರಿ ಹೋಗಲು, ಬದುಕಲು, ವಿಶ್ವಮಾನವನಾಗಿ ಬೆಳೆಯಲು ಈ ವಿಧಾನವು ಸಹಕಾರಿಯಾಗಿದೆ. ಕುವೆಂಪು ಅವರು ಕೆಲವು ಕಡೆ ಸಾಹಿತ್ಯ ರೂಪದಲ್ಲಿ ಸಮಾಜಕ್ಕೆ ಮದ್ದು ನೀಡಿದರು. ಆದರೆ ಮಂತ್ರಮಾಂಗಲ್ಯ ವಿವಾಹವನ್ನು ತಮ್ಮ ಮಕ್ಕಳಿಗೆ ಮಾಡುವುದರ ಮೂಲಕ ಎಲ್ಲರಿಗೂ ಮಾದರಿಯಾದರು. ಕುವೆಂಪು ಅವರ ನಡೆ ಮತ್ತು ನುಡಿ ಒಂದೇ ಆಗಿರುವುದಕ್ಕೆ ಇಂತಹ ಘಟನೆಗಳು ಪ್ರಮುಖವಾದ ಮುಖ್ಯ ನೆಲೆಯಾಗಿದೆ. ವಿಮರ್ಶಕರು ಕೃತಿ ಘಟನೆಗಳನ್ನು ಕಂಡು ಅವರ ವಿಮರ್ಶೆ ಮಾಡಿ ಟೀಕಿಸುವರು. ಆದರೆ ಇಂತಹ ವಿಚಾರಗಳು ಅವರ ಚಿಂತನೆಯ ಮುಖ್ಯ ಸೆಳೆತವಾಗಿದೆ.

ತೇಜಸ್ವಿಯವರ ವಿವಾಹದಿಂದಲೇ ಪ್ರಾರಂಭವಾದ ಈ ವಿವಾಹ ಸಂಹಿತೆಯು ಮುಂದೆ ಹಲವಾರು ಮದುವೆಗಳು ಇದೇ ಮಾದರಿಯಲ್ಲಿ ಆಗುವುದರ ಮೂಲಕ ಮುಂದಕ್ಕೆ ಸಾಗುತ್ತದೆ. ಕೇವಲ ಕಲವಿದರು, ಸಾಹಿತ್ಯ ಓದಿಕೊಂಡ ಗೆಳೆಯರು, ಕೆಲ ಹೋರಾಟದ ಸಂಘಟಕರ ಆಶ್ರಯದ ಜೊತೆಯಲ್ಲೇ ಈ ವಿವಾಹ ಆಚರಣೆ ನಡೆದು ಕೊಂಡು ಬಂದಿದೆ. ಸಾಮಾನ್ಯರಿಗೂ ಇದು ತಲುಪಿಸಿದರೆ ಇದರಿಂದ ಹೊಸ ಸಾಮಾಜಿಕ ಬದಲಾವಣೆಯನ್ನು ನಾವು ಕಾಣಲು ಸಾಧ್ಯವಾಗುತ್ತದೆ. 'ಮಾನವ ಮಂಟಪ', 'ಹಿರೇಮಗಳೂರು ಕಣ್ಣನ್', ಒಂದಷ್ಟು ಯುವ ಸಂಘಟಕರಿಂದ ಇದು ನಡೆದು ಕೊಂಡು ಬಂದಿದೆ. ಇದು ಕುವೆಂಪು ಅವರು ಸಮಾಜಕ್ಕೆ ನೀಡಿದ ಬಹುದೊಡ್ಡ ಸಾಮಾಜಿಕ ಕೊಡುಗೆಯಾಗಿದೆ ಮಂತ್ರಮಾಂಗಲ್ಯ. ಬಹುಶಃ ಇಂದು ಸಾವಿರಾರು ಪ್ರಜ್ಞಾವಂತ ಯುವಕ ಯುವತಿಯರು ಆದರ್ಶದ ಕನಸುಗಳ ಕಂಡವರು ಕುವೆಂಪು ಹಾಕಿಕೊಟ್ಟ ಈ ವಿಧಿ ವಿಧಾನದ ನೆಲೆಯಲ್ಲಿ ಬದುಕನ್ನು ನಿರ್ಮಿಸಿಕೊಂಡು ಅನುಸರಣೀಯರಾಗಿ ಬದುಕುತ್ತಿದ್ದಾರೆ.

ಕೇವಲ ಸಾಂಸ್ಥಿಕವಾದ ವಿವಾಹ ಆಚರಣೆಯನ್ನು ಕುವೆಂಪು ಅವರು ಕನ್ನಡದಲ್ಲಿ ಹೊಸ ಭಾಷೆಯನ್ನು ನೀಡುವುದರೊಂದಿಗೆ ತಾತ್ವಿಕ ಆಯಾಮವನ್ನು ನೀಡಿದರು. ಇದರಿಂದ ಪ್ರೇರೇಪಿತರಾದ ತೇಜಸ್ವಿ ಮತ್ತು ಕಡಿದಾಳು ಶಾಮಣ್ಣ ನೇತೃತ್ವದಲ್ಲಿ 'ಪ್ರೇಮಸೇನೆ' ಎಂಬ ಹೊಸ ಸಂಘಟನೆಯನ್ನು ಕಟ್ಟಿಕೊಂಡು ಸಣ್ಣ ಚಳವಳಿಯನ್ನು ಮಾಡಿದ್ದರು. 1964 ರಿಂದ ಲೋಹಿಯಾ ಸಮಾಜವಾದಿ ಪಕ್ಷದಲ್ಲಿ ಜಾತಿವಿನಾಶ ಕಾರ್ಯಕ್ರಮದಡಿಯಲ್ಲಿ ಅನೇಕ ಚಳವಳಿ, ಪ್ರತಿಭಟನೆ, ಆಂದೋಳನಗಳಲ್ಲಿ ಭಾಗವಹಿಸುತ್ತ, ಆ ಚಳವಳಿಗಳು ಕಡಿದಾಳು ಶಾಮಣ್ಣ, ತೇಜಸ್ವಿ, ಸುಂದರೇಶ್, ಮಂಡ್ಯ ಶ್ರೀನಿವಾಸ್, ರಾಮದಾಸ್ ಮತ್ತು ನಂಜುಂಡ ಸ್ವಾಮಿ. ಮುಂತಾದವರ ಮುಂಚೂಣಿಯಲ್ಲಿ ಜರುಗುತಿತ್ತು.

ಪ್ರೇಮ ವಿವಾಹ, ಅಂತರ ಜಾತಿ ವಿವಾಹ ಮತ್ತು ಸರಳ ವಿವಾಹ ಮಾಡಿಕೊಳ್ಳಲು ಜನರಿಗೆ ಪ್ರೇರಣೆ ನೀಡುವುದು. ಅವರ ನೆರವಿಗೆ ಬರುವುದು. ಮಂತ್ರಮಾಂಗಲ್ಯದ ಮೂಲಕ ಮದುವೆ ಮಾಡಿಸುವ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅಗತ್ಯ ಇರುವ ಕಡೆ ಮನವೊಲಿಸುವ ಕೆಲಸವನ್ನು ಶಾಮಣ್ಣ, ತೇಜಸ್ವಿ ಮಾಡುತ್ತಿದ್ದರು. ಇವರ ಇಂತಹ ಪ್ರಯತ್ನವನ್ನು ಕೆಲ ಘಟನೆಗಳ ಮೂಲಕ ಅವಲೋಕಿಸ ಬಹುದು. ಸಂಘಟನೆಯಲ್ಲಿ ಇರುವವರು ಎಲ್ಲರೂ ಮಂತ್ರಮಾಂಗಲ್ಯದ ಮೂಲಕ ಸರಳ ವಿವಾಹ ಮಾಡಿಕೊಂಡವರೇ ಆಗಿದ್ದರು. ಸಾಮಾನ್ಯರಿಂದ ಹಿಡಿದು ಮುಖ್ಯಮಂತ್ರಿಯಾದ ಕಡಿದಾಳು ಮಂಜಪ್ಪನವರ ಮನೆಯ ಮುಂದೆ ಅವರ ಮಗಳಿಗೆ ಮಂತ್ರಮಾಂಗಲ್ಯ ಮಾಡಿಸುವಂತೆ ಧರಣಿ ಕೂಡ ಮಾಡಿದ್ದರು. ಮುಖ್ಯಮಂತ್ರಿಗಳಾದ ಕಡಿದಾಳು ಮಂಜಪ್ಪನವರು ಮಗಳು ವೇದಾ ಮತ್ತು ಅಣ್ಣೇಗೌಡ್ರು ಮಗನಾದ ಶಾಂತನ ವಿವಾಹವನ್ನು ಅದ್ಧೂರಿಯಾಗಿ ಮಾಡುವ ಯೋಜನೆಯನ್ನು ಸಿದ್ಧಪಡಿಸುತ್ತಿದ್ದಾಗ ಇವರು ಮಾಡುವ ಧರಣಿಯು ಕೆಲವರಲ್ಲಿ ನಡುಕವನ್ನೇ ಸೃಷ್ಟಿಸುತ್ತದೆ. ನಿಶ್ಚಿತಾರ್ಥದ ಮನೆಗೆ ಹೋಗಿ ಮಾಡುವ ಧರಣಿಯಂತೂ ರೋಚಕವಾದ್ದು ಇವರ ಹೋರಾಟಗಳಲ್ಲಿ.

ತೇಜಸ್ವಿ ಇದ್ದವರು. ಏನ್ರಿ. ಇದು; ಮಂಜಪ್ಪನವರು ಮುಖ್ಯಮಂತ್ರಿ ಸ್ಥಾನದಲ್ಲಿದ್ದೋರು ಬಹಳ ಪ್ರಾಮಾಣಿಕರು, ಗಾಂಧಿವಾದಿ ಅಂತೆಲ್ಲ ಹೆಸರು ಪಡೆದೋರು. ದೊಡ್ಡದಾಗಿ ಎಲ್ಲದಕ್ಕೂ ಆದರ್ಶದ ಮಾತಾಡ್ತಾರೆ. ಮದುವೆ ಆಗೋ ಹುಡುಗಿಯರ ಆಸೆಗೆ ವಿರುದ್ಧವಾಗಿ ಇವ್ರು ಪುರೋಹಿತರ ಕಾಲಿಗೆ ಬೀಳ್ಸಿ, ಪ್ರಸಾದ ಕೇಳಿ, ಪಂಚಾಂಗ ನೋಡಿ ಮದುವೆ ಮಾಡೋಕೆ ಹೊರಟಿದ್ದಾರಲ್ರಿ. ಎಂಥಾ ಮೂಢನಂಬಿಕೇನ್ರಿ ಇವ್ರಿಗೆ. ನಡೀರಿ ಕಡಿದಾಳಿಗೆ ಹೋಗಿ ಸರಳ ಮದ್ವೆ ಮಾಡಿ ಅಂತಾ ಕೇಳ್ಕಳನಾ, ಒಂದ್ವೇಳೆ ಒಪ್ಲಿಲ್ಲ ಅಂದ್ರೆ ಧರಣಿ ಕಾಯಂ. ಅದ್ ಹ್ಯಾಗೆ ಮಂಜಪ್ನೋರು ಒಪ್ಕೊಳ್ಳೋದಿಲ್ಲ ನಾವು ನೋಡೇ ಬಿಡಾನ ಎಂದರು.[3] ತೇಜಸ್ವಿಯವರು ಮಾತುಕತೆಯ ಜವಾಬುದಾರಿಯನ್ನು ತೆಗೆದುಕೊಂಡರು. ತೆರೆದ ಜೀಪ್ನಲ್ಲಿ ತೆರಳಿದ ದಂಡು ಕಪ್ಪು ಬಾವುಟ ಪ್ರದರ್ಶಿಸಿ, ಅವರಿಗೆ ಮನವರಿಕೆ ಮಾಡಿಕೊಳ್ಳಲು ಮನವಿ ಪತ್ರ ಕೊಡುವ ಉದ್ದೇಶವಿತ್ತು. ಆದರೆ ಅಲ್ಲಿ ಮನವಿ ಪತ್ರವನ್ನು ಸಾರ್ವಜನಿಕವಾಗಿ ಗಟ್ಟಿ ದನಿಯಲ್ಲಿ ತೇಜಸ್ವಿಯವರು ಓದಿ ಸುದ್ದಿಯನ್ನು ಜಗತ್ಜಾಹಿರ ಮಾಡಿದರು. ಆ ಕ್ಷಣದಲ್ಲಿ ಮಂಜಪ್ಪನವರನ್ನು ಕಂಡು ಶಾಮಣ್ಣನವರ ಎದೆ ಝುಲ್ಲೆಂದಿತು. ಆದರೆ ಯಾವುದೇ ಭಯ, ಆತಂಕವಿಲ್ಲದೆ ತೇಜಸ್ವಿ ಪತ್ರ ಓದಿ ಮುಗಿಸಿ ಕಪ್ಪು ಬಾವುಟವನ್ನು ಅಲ್ಲಿ ನೆಟ್ಟು ಹೊರಟು ಬಿಟ್ಟರು. ನಂತರದ ದಿನಗಳಲ್ಲಿ ಇವರ ಸಂಘಟನೆಗೆ ಒಂದು ರೀತಿಯ ಹೊಸ ಧೈರ್ಯ ಬಂದೇ ಬಿಟ್ಟಿತ್ತು. ಇವುಗಳ ಫಲವಾಗಿ ಕುವೆಂಪು ಕೂಡ ತಾರಣಿಯವರ ಮದುವೆ ಮಾಡಿಸುವಾಗ ಈ 'ಪ್ರೇಮಸೇನೆ'ಯ ಮುಂಖಂಡರನ್ನು ಮನೆಗೆ ಕರೆದು ಕೆಲ ವಿಚಾರಗಳನ್ನು ಚರ್ಚೆ ಮಾಡಿ ಮದುವೆ ಮಾಡಬೇಕಾಗಿ ಬರುತ್ತದೆ. ತೇಜಸ್ವಿ ಇಂಥ ವಿಷಯದಲ್ಲಿ ತಮ್ಮ ತಂದೆಯನ್ನೇ ಪ್ರಶ್ನೆ ಮಾಡಿದೋರು..........

ಪುಟ್ಟಪ್ಪನವರೇ ವಿಷಯ ಪ್ರಸ್ತಾಪಿಸಿದರು: 'ತೇಜಸ್ವಿ, ಇಂದು ಕಲಾ ಇಬ್ಬರ ಮದುವೆಯು ಸರಳವಾಗಿ ಯಾವುದೇ ಕಂದಾಚಾರಗಳಿಲ್ಲದಂತೆ ನಡೆದಿದೆ. ಈಗ ತಾರಣಿ ಮದುವೇನೂ ಸರಳವಾಗಿಯೇ ನಡೆಯುತ್ತೆ. ಆದರೆ ಗಂಡಿನ ಮನೆಯವ್ರು ಸೌತ್ ಕೆನರಾದವ್ರು ಅಷ್ಟು ದೂರದಿಂದ ಬಂದ ಗಂಡಿನ ಕಡೆಯ ನೆಂಟರಿಗೆ ಮಧ್ಯಾಹ್ನ ಒಂದು ಊಟ ಹಾಕಿ ಆತಿಥ್ಯ ಮಾಡಬೇಕಾಗತ್ತೆ. ಮನೆಯಲ್ಲಿ ಊಟ ಇಟ್ಕಳ್ಳದು ಸರಿಯಾಗಲ್ಲ, ಅದಕ್ಕೆ ಮನೆ ಹತ್ತಿರದಲ್ಲೇ ಇರೋ ಛತ್ರದಲ್ಲಿ ಮದುವೆ ಮಾಡ್ಬಿಟ್ಟು ಇನ್ನೂರೈವತ್ತು ಜನಕ್ಕೆ ಊಟ ಹಾಕಣ ಅಂತಿದ್ದೀವಿ' ಅಂದ್ರು.............. 'ಇನ್ನೂ ಈ

Vol. 4, Issue: 4, May: 2015
(IJRE) ISSN: (P) 2347-5412 ISSN: (O) 2320-091X

ಬಗ್ಗೆ ನಿಮ್ಮದೇನಾದ್ರೂ ತಕರಾರು ಇದ್ರೆ ಈಗ್ಲೇ ಹೇಳ್ಬಿಡಿ. ನಾಳೆ ನೀವು ಮದ್ವೆ ಸಂದರ್ಭದಲ್ಲಿ ಕಪ್ಪು ಬಾವುಟ ಹಿಡಿಯುವಂತ ಸಂದರ್ಭ ಸೃಷ್ಟಿಯಾಗೋದು ಬೇಡ' ಅಂದ್ರು.[4] ಸರಳ ವಿವಾಹವನ್ನು ಕುಟುಂಬದ ನೆಲೆಯಿಂದ ಮಾಡುವುದರೊಂದಿಗೆ ಸಮಾಜಕ್ಕೆ ಮಾದರಿಯಾಗುವಂತಹ ಕೆಲಸವನ್ನು ಕುವೆಂಪು ಮತ್ತು ತೇಜಸ್ವಿಯವರು ಮಾಡಿಕೊಂಡು ಬಂದರು. ಕುವೆಂಪು ಅವರ ಆಲೋಚನೆಯನ್ನು ಬಹಳ ಕ್ರಾಂತಿಕಾರಕವಾಗಿ ಜಾರಿಗೆ ತರುವುದರಲ್ಲಿ ತೇಜಸ್ವಿ ಮತ್ತು ಗೆಳೆಯರ ಒಮ್ಮತ ಹಾಗೂ ಆ ನೆಲೆಯಲ್ಲಿ ಎಲ್ಲರನ್ನು ಒಗ್ಗೂಡಿಸುವಂತಹ ಕೆಲಸದಲ್ಲಿ ಅವರ ಪರಿಶ್ರಮವನ್ನು ಸ್ಮರಿಸಬಹುದು. ಈ ಮಹಾಕಾರ್ಯವನ್ನು ಮುಂದುವರಿಸುವ ನಿಟ್ಟಿನಲ್ಲಿ ಕೆಲ ಸಂಘ ಸಂಸ್ಥೆಗಳು, ಯುವಕರು ಇಂದಿಗೂ ಮತ್ತಷ್ಟು ಸಂಘಟಿತರಾಗಬೇಕಾದ ಅಗತ್ಯವಿದೆ. ಕೇವಲ ಆದರ್ಶದ ದೃಷ್ಟಿಯಿಂದ ನೋಡುವ ಬದಲು ಸಾಮಾಜಿಕವಾದ ಜವಾಬ್ದಾರಿಯನ್ನು ಅರಿತು ಈ ಕಾರ್ಯಕ್ಕೆ ಎಲ್ಲರೂ ಪ್ರೋತ್ಸಾಹ ನೀಡಬೇಕಾಗಿದೆ.

ಸಾಂಸ್ಥಿಕವಾದ ಕೆಲಸ ಕೂಡ ಕನ್ನಡದಲ್ಲಿ ಆಗಬೇಕೆಂಬ ಆಶಯವನ್ನು ಇಬ್ಬರೂ ಕೂಡ ಹೊಂದಿದ್ದರು. ಜೊತೆಗೆ ಆ ದೆಸೆಯಲ್ಲಿ ಅವರ ಪ್ರಯತ್ನ ಕೂಡ ಬಹಳ ನಿಷ್ಠ ಹಾಗೂ ನಿಖರವಾಗಿತ್ತು. ಕುವೆಂಪು ಆಲೋಚನೆಗಳ ಕ್ರಿಯಾ ರೂಪವನ್ನು ತೇಜಸ್ವಿಯವರ ಬದುಕು ಮತ್ತು ಬರಹಗಳಲ್ಲೂ ಕಾಣಬಹುದು. ಜಾತಿವಿನಾಶ ಕುರಿತಾಗಿ ತೇಜಸ್ವಿಯವರು ಬರೆದ ಕೆಲ ಲೇಖನಗಳನ್ನು ಇಲ್ಲಿ ಗಮನಿಸಬಹುದು. ನಮ್ಮ ಗಂಭೀರ ಚಿಂತನೆ ಇವರಿಗೆ ಅರ್ಥವಾಗಿಲ್ಲ, ನಿಜವಾದ ಜಾತ್ಯಾತೀತರಿಗೆ-ಮೀಸಲಾತಿ ಎಲ್ಲಿ?, ನಾವು ಬಿಟ್ಟರೂ ನಮ್ಮನ್ನು ಬಿಡದ ಜಾತಿ, ಜಾತಿ ವರ್ಗಗಳ ಕದನ, ಮಂಥನ ಎಂಬ ಲೇಖನಗಳಲ್ಲಿ ಅಂತರ್ ಜಾತಿ ವಿವಾಹ ಮತ್ತು ಅದನ್ನು ಪ್ರೋತ್ಸಾಹಿಸುವ ನಿಟ್ಟನಲ್ಲಿ ಸರ್ಕಾರ ಮೀಸಲಾತಿಯನ್ನು ಜಾರಿ ಮಾಡಬೇಕೆಂಬ ಒತ್ತಾಯವನ್ನು ತೇಜಸ್ವಿ ಮಾಡಿದ್ದರು. ಕೆಳವರ್ಗದ ಹೆಣ್ಣು ಮೆಲ್ವರ್ಗದ ಗಂಡು, ಅಂತರ್ ಧರ್ಮಿಯ, ಅಂತರ್ ಜಾತಿಗಳ ವಿವಾಹವನ್ನು ಸರ್ಕಾರ ಪ್ರೋತ್ಸಾಹಿಸುವಂತೆ ಸಲಹೆಯನ್ನು ನೀಡಿದ್ದರು. ಈ ಬಗ್ಗೆ ದಲಿತ ಕವಿ ಮತ್ತು ಎಂ.ಎಲ್.ಸಿ ಯೂ ಆಗಿದ್ದ ಸಿದ್ದಲಿಂಗಯ್ಯನವರು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದಾಗ ಬಹಳ ಮುಕ್ತವಾಗಿ ಅವರನ್ನು ಪ್ರಶಂಸಿದ್ದರು. ಇಂತಹ ಪ್ರಯತ್ನಕ್ಕೆ ಸಂಘಟನೆಯ ಕೊರತೆ, ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಇನ್ನೂ ಸರಿಯಾದ ರೀತಿಯಲ್ಲಿ ಕಾನೂನು ರೂಪುಗೊಂಡಿಲ್ಲ ಎಂಬುದು ದುರದೃಷ್ಟಕರ ಸಂಗತಿಯಾಗಿದೆ. ಒಂದು ವೇಳೆ ಮೀಸಲಾತಿ ನೀಡುವುದಾದರೂ ಪರಿಶಿಷ್ಟವರ್ಗದ ಹೆಣ್ಣು ಮಕ್ಕಳಿಗೆ ಮುಂದುವರೆದ ಗಂಡುಗಳೇ ದೊರೆಯದೆ ಅವರು ಶಾಶ್ವತವಾಗಿ ಹಿಂದುಳಿಯುತ್ತಿದ್ದಾರೆಂದು. ಇದು ಹಿಂದುಳಿದ ಜಾತಿಗಳಲ್ಲಿ ನಿಜವಾಗಿಯೂ ಇರುವ ತೊಂದರೆ. ಅಂತರ್ಜಾತೀಯ ಮದುವೆಗಳಲ್ಲಿ ಹೆಣ್ಣುಮಕ್ಕಳು ಗಂಡುಗಳಿಗಿಂತ ಹಿಂದುಳಿದ ಜಾತಿಗೆ ಸೇರಿದ್ದರೆ ಅಂಥವರಿಗೆ ಮೊದಲು ಪರಿಗಣಿಸುತ್ತೇವೆಂದು ಶಾಸನ ಮಾಡಿದರೆ ಈ ಸಮಸ್ಯೆಗೆ ಕೆಲಮಟ್ಟಿಗಿನ ಪರಿಹಾರ ದೊರೆಯುತ್ತದೆ.[5]

ಈವರೆಗಿನ ಅಂತರ್ಜಾತಿ ವಿವಾಹಗಳು ಹೆಚ್ಚು ನಡೆದಿರುವುದು ಕೆಳ ಹಿಂದುಳಿದ ವರ್ಗದ ಗಂಡು ಹಾಗೂ ಮೆಲ್ವರ್ಗದ ಹೆಣ್ಣು ಮಕ್ಕಳಿಗೆ. ಆದರೆ ಕೆಳ ಹಿಂದುಳಿದ ವರ್ಗದ ಹೆಣ್ಣು ಮಕ್ಕಳು ಗಂಡುಗಳಿಲ್ಲದೆ ಆ ವರ್ಗಗಳಲ್ಲಿ, ಮೇಲ್ವರ್ಗದ ಗಂಡುಗಳು ಮದುವೆ ಮಾಡಿಕೊಳ್ಳದೆ ಇರುವುದರಿಂದ ಹೊಸ ಸಾಮಾಜಿಕ ಸಮಸ್ಯೆ ತಲೆದೋರಿದಂತೆ ಆಗಿದೆ. ಈ ಕಾರಣಗಳಿಂದಾದರೂ ಸರ್ಕಾರ ಮೀಸಲಾತಿಯನ್ನು ಕೆಳ ಹಿಂದುಳಿದ ವರ್ಗದ ಹೆಣ್ಣು ಮಕ್ಕಳ ಭವಿಷ್ಯದ ದೃಷ್ಟಿಯಿಂದ ನೀಡಬೇಕಾದ ಅಗತ್ಯವಿದೆ. ಯುವಕರು ಜಾತಿಪದ್ಧತಿಯನ್ನು ಸಂಪೂರ್ಣ ತಿರಸ್ಕರಿಸಿ ತಮಗೆ ಯಾರು ಇಷ್ಟವಾಗುತ್ತಾರೋ ಅವರನ್ನು ಮದುವೆಯಾಗುವಂಥ ಪೂರ್ಣ ಸ್ವತಂತ್ರ ಪರಿಸರ ಒಂದನ್ನು ನಿರ್ಮಾಣ ಮಾಡುವುದೇ

ಅಂತರ್ಜಾತಿ ವಿವಾಹಗಳನ್ನು ಮಾಡಿಸುತ್ತ ಬಂದಿರುವ ಪ್ರೇಮ ಸೇನೆ, ಮಾನವ ಮಂಟಪ, ರೈತ ಸಂಘ ಇತ್ಯಾದಿ ಸಂಘಟನೆಗಳ ಉದ್ದೇಶವಾಗಿದೆ. ಆರ್ಥಿಕ ಸುಧಾರಣೆ, ಸಾಮಾಜಿಕ ಸುಧಾರಣೆ, ಧಾರ್ಮಿಕ ಸುಧಾರಣೆ ಮೂರನ್ನೂ ಮಂತ್ರ ಮಾಂಗಲ್ಯದಂತಹ ಸರಳ ವಿವಾಹ ಒಂದರಲ್ಲೇ ಅಳವಡಿಸಿದರು ಕುವೆಂಪು.

**ಕೊನೆ ಟಿಪ್ಪಣಿ**

1. ಕುವೆಂಪು, ಕುವೆಂಪು ಸಮಗ್ರ ಗದ್ಯ, ಸಂಪುಟ 2, ಪುಟ: 1212.
2. ಅದೇ;
3. ಅಕ್ಷತಾ ಕೆ. ಮತ್ತು ಕಡಿದಾಳು ಶಾಮಣ್ಣ, ಕಾಡುತೊರೆಯ ಜಾಡು, ಅಭಿನವ ಪ್ರಕಾಶನ, 2011, ಪುಟ: 35.
4. ಅದೇ; ಪುಟ: 41.
5. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿಜವಾದ ಜಾತ್ಯಾತೀತರಿಗೆ -ಮೀಸಲಾತಿ ಎಲ್ಲಿ? 16 ಡಿಸೆಂಬರ್, 1990, ಲಂಕೇಶ್ ಪತ್ರಿಕೆ.

**ಪರಾಮರ್ಶೆ**


1. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಶೂದ್ರ ತಪಸ್ವಿ ನಾಟಕದ ಮುನ್ನಡಿ, 02-01-1944, ಕರ್ನಾಟಕ ಸಾಹಿತ್ಯ ಅಕಾಡೆಮಿ, 2003, ಪುಟ: 121.
2. ಅದೇ;
3. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಶೂದ್ರ ತಪಸ್ವಿ ಮಾರ್ನುಡಿ, 24-07-1947, ಕರ್ನಾಟಕ ಸಾಹಿತ್ಯ ಅಕಾಡೆಮಿ,2003, ಪುಟ: 129
4. ಅದೇ;
5. ಅದೇ;
6. ಲೇ: ಡಾ.ಕೆ. ಮರುಳಸಿದ್ದಪ್ಪ, ಕುವೆಂಪು ನಾಟಕಗಳು: ವಸ್ತು ಮತ್ತು ರೂಪ, ಡಾ.ಚಕ್ಕೆರೆ ಶಿವಶಂಕರ್(ಸಂ) ಸಹ್ಯಾದ್ರಿಯ ಸೂರ್ಯ, ಕ.ಸಾ.ಪ, ಬೆಂ., ಪುಟ: 157
7. ಡಿ.ಆರ್. ನಾಗರಾಜ್, ಕುವೆಂಪು ಕೃತಿಗಳಲ್ಲಿ ವರ್ಣ-ವರ್ಗ ಸಂಘರ್ಷ, ಅಕ್ಷರ ಪ್ರಕಾಶನ, 2003, ಪುಟ: 33
8. ಗುರುಲಿಂಗ ಕಾಪಸೆ, ಅಧ್ಯಕ್ಷರ ನುಡಿ, ಕುವೆಂಪು ಅವರ ಮೂರು ನಾಟಕಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂ 2003/12/29
9. ಲೇ: ಲಿಂಗದೇವರು ಹಳೆಮನೆ, ಕುವೆಂಪು ನಾಟಕಗಳು: ಒಂದು ಹಿನ್ನೋಟ, ಡಿ.ಎಸ್.ನಾಗಭೂಷಣ (ಸಂ) ಕುವೆಂಪು ಒಂದು ಪುನರನ್ವೇಷಣೆ, ಲೋಹಿಯ ಪ್ರಕಾಶನ, ಬಳ್ಳಾರಿ. 2005, ಪುಟ: 187
10. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಜಲಗಾರ ನಾಟಕ, 2003, ಪುಟ: 29.
11. ಲೇ. ಬಿ.ಎಸ್. ನಾಗರಾಜ್ ಭಟ್, ಜಲಗಾರ ಮತ್ತು ಸಮಕಾಲೀನ ಸಮಸ್ಯೆ, ಡಾ.ಚಕ್ಕೆರೆ ಶಿವಶಂಕರ್(ಸಂ) ಸಹ್ಯಾದ್ರಿಯ ಸೂರ್ಯ, ಕ.ಸಾ.ಪ, ಬೆಂ., ಪುಟ; 164.
12. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಬೆರಳ್ ಗೆ ಕೊರಳ್, 2003, ಪುಟ: 115

13.ಡಾ.ಎಚ್. ತಿಪ್ಪೇರುದ್ರಸ್ವಾಮಿ, ಕುವೆಂಪು ಅವರ ನಾಟಕಗಳು, 1969, ಪುಟ: 122.

14.ಲೇ: ಎಂ.ಎಸ್. ವೇದಾ, ಬೆರಳ್ ಗೆ ಕೊರಳ್, ಏಕಲವ್ಯ, ಒಂದು ತೌಲನಿಕ ನೋಟ, ಪ್ರೊ.ಕೆ.ಭೈರಪ್ಪ ಮತ್ತು ಪ್ರೊ. ಅರವಿಂದ ಮಾಲಗತ್ತಿ (ಸಂ) ಕುವೆಂಪು: ಪುನರ್ಮನನ, ಮೈ.ವಿ.ವಿ ಪ್ರಸಾರಂಗ, ಪುಟ:158.

15.ಲೇ. ಡಾ. ರಾಗೌ, ಬೆರಳ್ ಗೆ ಕೊರಳ್ ಮತ್ತು ಸಂಕೇತಿಕತೆ, ಎಸ್.ಚನ್ನಪ್ಪ (ಸಂ) ಕುವೆಂಪು ಸಾಹಿತ್ಯ ಸಮಾಲೋಚನೆ, 2008, ಪುಟ: 64.

16.ಡಾ. ಸಾ.ಶಿ. ಮರುಳಯ್ಯ, ಕುವೆಂಪು ಸ್ವಪ್ನ ಲೋಕ, ಪ್ರಕಾಶಕರು ಸ್ವಪ್ನ, 2013, ಪುಟ:106.

17.ಡಿ.ಆರ್. ನಾಗರಾಜ್, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, 2003, ಪುಟ: 32.

18.ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಅಭಿನವ ಪ್ರಕಾಶನ 2012, ಪುಟ: 172

19.ಸುಜನಾ, ಪರಂಪರೆ ಮತ್ತು ಕುವೆಂಪು, ಸಹ್ಯಾದ್ರಿ ಪ್ರಕಾಶನ, ಮೈಸೂರು, 1984, ಪುಟ: 64.

20.ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ: 65

21. ಅದೇ; ಪುಟ: 134

22.ಅದೇ: ಪುಟ: 134

23.ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಅಭಿನವ ಪ್ರಕಾಶನ 2012, ಪುಟ: 160

24.ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ-1, ಪುಟ: 61.